KACD420005372023

## ಹೊಳಲ್ಕೆರೆಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ

### ಸಿ.ಸಿ. ನಂಃ 257/2023

ಫಿರ್ಯಾದಿದಾರರು : ಸರ್ಕಾರದ ಪರವಾಗಿ – ಚಿಕ್ಕಜಾಜೂರು ಪೋಲೀಸ್ ಠಾಣೆ

**–ವಿರುದ್ಧ–**

ಆರೋಪಿತರು : ಪ್ರಭುದೇವ ಬಿನ್ ಕರಿಮಲ್ಲಪ್ಪ ಮತ್ತು ಇತರರು

**–:: ದೋ ಷಾ ರೋ ಪ ಣೆ ::–**

ಶ್ರೀ ಉಮೇಶ, ಎಂ.ಪಿ., ಬಿ.ಎ.ಎಲ್., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ., ಹೊಳಲ್ಕೆರೆ ಆದ ನಾನು

ಆರೋಪಿತರು : 1. ಪ್ರಭುದೇವ ಬಿನ್ ಕರಿಮಲ್ಲಪ್ಪ ,
61 ವರ್ಷಗಳು, ವೃತ್ತಿಃ ವ್ಯಾಪಾರ,
2. ಶ್ರೀಮತಿ ಪೂರ್ಣಿಮ ಎಂ. ಸಿ. ಕೋಂ ಪ್ರಭುದೇವ,
58 ವರ್ಷಗಳು, ವೃತ್ತಿಃ ಮನೆಕೆಲಸ,
ಇಬ್ಬರೂ ವಾಸಃ ಚಿಕ್ಕಜಾಜೂರು ಗ್ರಾಮ, ಹೊಳಲ್ಕೆರೆ ತಾಲ್ಲೂಕು.

ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ,

ದಿಃ 16–11–2022 ರಂದು ರಾತ್ರಿ 9–20 ರ ಸಮಯದಲ್ಲಿ ಹೊಳಲ್ಕೆರೆ ತಾಲ್ಲೂಕು ಚಿಕ್ಕಜಾಜೂರು ಗ್ರಾಮದ ಆರೋಪಿತರ ವಾಸದ ಮನೆಯ ಮುಂಭಾಗದಲ್ಲಿ ಹಾದು ಹೋಗಿರುವ ಸಿಮೆಂಟ್ ರಸ್ತೆಯ ಮಧ್ಯದಲ್ಲಿ ಸಾಕ್ಷಿ–1 ರವರು ತಮ್ಮ ದನಕರುಗಳಿಗಾಗಿ ಅವರಿಗೆ ಪರಿಚಯಸ್ಥರ ಮನೆ ಹಾಗೂ ಹೋಟೆಲ್ ಗಳಿಂದ ಪ್ಲಾಸ್ಟಿಕ್ ಕೊಡಪಾನದಲ್ಲಿ ಮುಸುರೆಯನ್ನು ತೆಗೆದುಕೊಂಡು ಮನೆಗೆ ಹೋಗಲು ನಡೆದುಕೊಂಡು ಹೋಗುತ್ತಿರುವಾಗ, ಆಕಸ್ಮಿಕವಾಗಿ ಮುಸುರೆಯ ಕೊಡಪಾನ ಬಿದ್ದು, ರಸ್ತೆಯಲ್ಲಿ ಮುಸುರೆ ಚೆಲ್ಲಿದ್ದರಿಂದ, ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ, 1 ನೇ ಆರೋಪಿತನಾದ ನೀನು ಏಕಾಏಕಿ ಸಾಕ್ಷಿ–1 ರವರೊಂದಿಗೆ ಗಲಾಟೆ ಮಾಡಿ, ನೀನು ನಮ್ಮ ಮನೆಯ ಮುಂದೆ ಮುಸುರೆ ಚೆಲ್ಲಿದ್ದೀಯಾ ಸೂಳೇಮುಂಡೆ, ಆದರಿಗಿತ್ತಿ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು

KACD420005372023

ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಆಪಾದಿಸಲಾಗಿರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಜಗಳ ಮಾಡುವ ಸಮಾನ ಉದ್ದೇಶದಿಂದ, ಸಾಕ್ಷಿ-1 ರವರು ಏಕೆ ಈ ರೀತಿ ಬೈಯುತ್ತೀರಾ ನಾನು ಕ್ಲೀನ್ ಮಾಡಿಕೊಳ್ಳುತ್ತೇನೆ ಎಂದು ಹೇಳಿದರೂ ಕೇಳದೇ ಸಾಕ್ಷಿ-1 ರವರ ಮೈಕೈಗೆ ಕೈಕಾಲುಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿತರಾದ ನೀವು ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡುತ್ತೀರೆಂದು ಆಪಾದಿಸಲಾಗಿರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಜಗಳ ಮಾಡುವ ಸಮಾನ ಉದ್ದೇಶದಿಂದ ನಿಮ್ಮಲ್ಲಿಯ 1 ನೇ ಆರೋಪಿಯಾದ ನೀನು ಸಾಕ್ಷಿ-1 ರವರು ತೊಟ್ಟಿದ್ದ ಸೀರೆಯನ್ನು ಹಿಡಿದು ಎಳೆದಾಡಿ ಮರ್ಯಾದೆಗೆ ದಕ್ಕೆಯನ್ನುಂಟು ಮಾಡಿರುತ್ತೀರಾ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 354 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಸಿವಿಲ್ ನ್ಯಾಯಾಧೀಶರು ಮತ್ತು
ದಿಃ 29-01-2024 ಜೆ ಎಂ ಎಫ್ ಸಿ, ಹೊಳಲ್ಕೆರೆ.